ಮತ್ತೆ ರಿ–ಟೆಂಡರ್ ಕರೆದಿದ್ದೇವೆ. ರಿ–ಟೆಂಡರ್ ಈಗಾಗಲೇ ಅಪ್ರೂವಲ್ ಆಗಿ ಹೋಗಿದೆ. ನಿರ್ದಿಷ್ಟವಾಗಿ ನಾನು ಹೇಳಬಯಸುತ್ತೇನೆ, ಈ ವರ್ಷದಲ್ಲೇ ಇದಕ್ಕೆ ಬೇಕಾಗಿರುವಂತಹ ಹಣವನ್ನು ಪೂರ್ಣವಾಗಿಟ್ಟು, ಈ ವರ್ಷದಲ್ಲೇ ಪೂರ್ಣ ಮಾಡಿ ಮುಗಿಸುತ್ತೇವೆ.

ಅಧ್ಯಕ್ಷರು :– ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಗೊಂದಲ)

ಇದೇ ವರ್ಷವೇ ಮಾಡುತ್ತೇನೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರಲ್ಲಾ?

(ಗೊಂದಲ)

ಶ್ರೀ ಜಿ.ಎಸ್. ಗಡ್ಡದೇವರಮಠ್ :– .....ಯಾವ ಇಲಾಖೆಗೆ ಸಂಬಂಧಿಸಿದ ಇಂಜಿನಿಯರ್‌ಗಳನ್ನು ಹಾಕಿದರೂ ಅವರು ಎಂಟು ತಿಂಗಳೂ ಕೂಡ ಇರುವುದಿಲ್ಲ.

ಅಧ್ಯಕ್ಷರು :– ಅವರು ಇದೇ ವರ್ಷ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ.ಎಸ್. ಗಡ್ಡದೇವರಮಠ್ :– ಈ ಯೋಜನೆಯನ್ನು ಮುಗಿಸಬೇಕೆಂದು ನಿಮಗೆ ಸಾಕಷ್ಟು ಕಳಕಳಿ ಇದೆ. ಆದರೆ ಇಂಜಿನಿಯರ್ಸ್ ಬರೇ ನಮ್ಮಂತಹವರನ್ನು ಕಾಯುವುದು ಆಗಿದೆಯೇ ಹೊರತು ಕೆಲಸದ ಕಡೆಗೆ ಲಕ್ಷ್ಯ ಕೊಡುವಂತಹ ವ್ಯವಸ್ಥೆ ಅಲ್ಲಿ ಆಗುತ್ತಿಲ್ಲ. ಅದಕ್ಕಾಗಿ ಯಾವುದೇ ಒಬ್ಬ ನಿರ್ದಿಷ್ಟವಾದಂತಹ ಇಂಜಿನಿಯರ್ ಅನ್ನು ನೇಮಿಸಿ, ಆದಷ್ಟು ತೀವ್ರವಾಗಿ ಆ ಕೆಲಸವನ್ನು ಪೂರೈಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಸದಸ್ಯರು ಹೇಳಿರುವಂತಹ ಸಲಹೆಯನ್ನು ಪರಿಶೀಲನೆ ಮಾಡಿ, ಖಂಡಿತವಾಗಿಯೂ ಇದೇ ವರ್ಷದಲ್ಲಿ ಮುಗಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

<u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :</u>

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ದಿನಾಂಕ 18–07–2007 ರಂದು 8 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :– ಮಂಡಿಸಲಾಯಿತು.